ಬೋಗಸ್ ಸರ್ಟಿಫಿಕೇಟ್‌ಗಳು ಇವೆ ಎಂದು ಹೇಳುತ್ತಿದ್ದಾರೆ. ಆದರಲ್ಲೂ ಮುಖ್ಯವಾಗಿ ಯೂನಿವರ್ಸಿಟಿ ಪೇಪರ್ಸ್ ವ್ಯಾಲ್ಯೂ ಮಾಡುವಾಗ, ಟ್ಯಾಬ್ಯುಲೇಟ್ ಮಾಡುವಾಗ ಹೆಚ್ಚು ಅಂಕಗಳನ್ನು ಟ್ಯಾಂಪರ್ ಮಾಡಿ ಅರ್ಹತೆ ಇಲ್ಲದೇ ಇರತಕ್ಕವರು ಪಾಸಾಗಿರತಕ್ಕದ್ದು ಹಿಂದೆ ನಡೆದಿದೆ. ಮತ್ತು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡತಕ್ಕದ್ದರಲ್ಲಿ ಬೋಗಸ್ ಸರ್ಟಿಫಿಕೇಟ್‌ಗಳನ್ನು ಕೊಡುತ್ತಿದ್ದಾರೆಂದು ತಿಳಿದು ಬಂದಿದೆ. ಇದರಿಂದ ಅರ್ಹತೆ ಇಲ್ಲದವರು ಹೆಚ್ಚಿನ ಕೆಲಸಕ್ಕೆ ಸೇರುವ ಸಂದರ್ಭ ಇದೆ. ಆದ್ದರಿಂದ ಇದನ್ನು ವಿಚಾರಣೆ ಮಾಡಿ ಸಾಧ್ಯವಾದಷ್ಟು ಅಕ್ರಮಗಳನ್ನು ತಪ್ಪಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತೀರ ?

SRI D. DEVARAJ URS.—Sir, immediately the complaint came against a peon he has been arrested. I am also aware that this peon cannot do it by himself. There must be others behind him. If this is agreed to, I would only request the hon. Members not to meddle with the investigation in any manner. Let them not say that the police are catching this man or that man. It is none of our business. If the police have to find out the culprit, sometimes on suspicion people may be interrogated. How can we say that this is the culprit, and that is not the culprit. You cannot bind the people who are entrusted with the responsibility of investigation and you cannot say 'don't do this or do this'. I have not done it and it is never my habit to do so. I would only appeal to the hon. Members not to talk like this or say that the police are harassing this man or that man. Sometimes it becomes necessary in the course of investigation, but it does not necessarily mean that everybody they approach will be declared a culprit and he will be punished. If you want the police to do a thing or not to do a thing, this amounts to gross interference and I am not prepared to do it.

The hon. Member Sri Shamanna was pleased to say that there are others who are responsible for this. I totally agree with him and that is why this investigation should go on unfettered and full freedom must be given to the C.I.D.

Matters under Rule 312

(i) *re* : nonfunctioning of Land Tribunal in Bangalore South Taluk.

ಅಧ್ಯಕ್ಷರು —ಈಗ ೩೧೨ನೇ ನಿಯಮದ ಪ್ರಕಾರ ಶ್ರೀಮಾನ್ ಪಿ. ರಾಂದೇವ್ ಅವರು ಮಾತನಾಡಬೇಕಾದ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿರುವುದರಿಂದ ಈಗ ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ತಮ್ಮ ವಿಷಯದ ಬಗ್ಗೆ ಚರ್ಚೆ ಮಾಡಬಹುದು.

† ಶ್ರೀ ಬಿ. ವಿ. ರಾಮಚಂದ್ರರೆಡ್ಡಿ (ಪರ್ತೂರ). —ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮೊನ್ನೆ ತಾನೆ ಈ ಸದನದಲ್ಲಿ ಪ್ರಸ್ತಾಪಿಸಿದ ಹಾಗೆ ಭೂ ನ್ಯಾಯ ಮಂಡಲಿಗಳು ವಾರದಲ್ಲಿ ಐದು ದಿವಸ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಆದರೆ ನಮ್ಮ ತಾಲ್ಲೂಕಿನ ವಿಷಯ ಹೇಳುವುದಾದರೆ, ಇಲ್ಲಿನ ಭೂ ನ್ಯಾಯ ಮಂಡಳಿಯು ಸಭೆಯು ಕಳೆದ ಆರು ತಿಂಗಳುಗಳಿಂದ ನಡದೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿರತಕ್ಕ ಭೂ ನ್ಯಾಯ ಮಂಡಳಿಯ ಮೇಲೆ ಸರ್ಕಾರದವರು ಎಕ್ಸ್‌ಪೆರಿಮೆಂಟ್ ಮಾಡುತ್ತಿದ್ದಾರೆಯೇ ಹೇಗೆ ಎಂದು ತಿಳಿದುಕೊಳ್ಳಬೇಕಾಗಿದೆ. ಸರ್ಕಾರಕ್ಕೆ ಭೂನ್ಯಾಯ ಮಂಡಲಿಯನ್ನು ರಚನೆ ಮಾಡುವುದಕ್ಕೆ ಆಸಕ್ತಿ ಇದೆ,

ಆದರೆ ಅವು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತವೋ ಇಲ್ಲವೋ ಎಂಬುದನ್ನು ಸರ್ಕಾರದವರು ಪರಿಗಣಿಸಬೇಕು. ಇಲ್ಲಿಯ ಭೂ ನ್ಯಾಯ ಮಂಡಲಿಯ ಆಡಳಿತ ಪಕ್ಷದಲ್ಲಿ ಎರಡು ಗುಂಪುಗಳು ಇವೆ. ಒಂದೊಂದು ಗುಂಪಿನವರು ತಮ್ಮ ತಮ್ಮ ದಳ್ಳಾಳಿಗಳನ್ನು ಸೇರಿಸಿಕೊಂಡು ಲ್ಯಾಂಡ್ ಟ್ರಿಬ್ಯೂನಲ್ ಕೇಂಗಳ ಬಗ್ಗೆ ಸ್ಟೇ ಆರ್ಡರ್ ತರುತ್ತಿದ್ದಾರೆ. ಆ ಗುಂಪಿನ ಮೇಲೆ ಈ ಗುಂಪಿನವರು ಸ್ಟೇ ಆರ್ಡರ್ ತರುತ್ತಾರೆ. ಈ ಗುಂಪಿನವರು ಆ ಗುಂಪಿನ ಮೇಲೆ ಸ್ಟೇ ಆರ್ಡರ್ ತರುತ್ತಾರೆ. ಇದರಿಂದಾಗಿ ಭೂ ನ್ಯಾಯ ಮಂಡಲಿಯ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಭೂ ನ್ಯಾಯ ಮಂಡಲಿಯನ್ನು ಮೊನ್ನೆ ತಾನೆ ಪುನರ್‌ರಚನೆ ಮಾಡಿ ಆದರಲ್ಲಿದ್ದ ಒಬ್ಬ ಸದಸ್ಯರನ್ನು ತೆಗೆದು ಹಾಕಿದ್ದಾರೆ. ಈ ಸದಸ್ಯರ ಮೇಲೆ ಸರ್ಕಾರದವರಿಗೆ ನಂಬಿಕೆ ಇಲ್ಲದಿದ್ದ ಮೇಲೆ ಅವರನ್ನೇಕೆ ಇಲ್ಲಿ ಸೇರಿಸಿಕೊಳ್ಳಬೇಕಾಗಿತ್ತು. ಇದರಿಂದ ಏನೋ ಭ್ರಷ್ಟಾಚಾರ ಇದೆ ಎಂದು ಎಲ್ಲರಿಗೂ ಅನುಮಾನ ಬಂದಿದೆ. ಸರ್ಕಾರದವರು ಈ ಅನುಮಾನವನ್ನು ಹೋಗಲಾಡಿಸಬೇಕು. ಎರಡನೆಯದಾಗಿ ಈಗ ಅಲ್ಲಿ ಬೇರೆ ಸದಸ್ಯರನ್ನು ಹಾಕಿದ್ದಾರೆ. ಅವರು ಒಬ್ಬ ಕಾರ್ಮಿಕರು. ಅವರು ಕಾರ್ಖಾನೆಯಲ್ಲಿ ಕೆಲಸಕ್ಕೆ ಹೋಗುತ್ತಾರೆ. ಅವರು ವಾರದಲ್ಲಿ ಐದು ದಿನ ಭೂ ನ್ಯಾಯ ಮಂಡಲಿಗೆ ಹೇಗೆ ಹೋಗುತ್ತಾರೆ ? ಅಂತಹವರನ್ನು ಸಾಕತಕ್ಕ ಪರಿಸ್ಥಿತಿ ಎತಕ್ಕೆ ಬಂತು ? ಆ ಪಕ್ಷದಲ್ಲಿ ಬೇರೆಯವರು ಇರಲಿಲ್ಲವೇ ? ಇಂತದ್ದನ್ನೆಲ್ಲ ಸಂಪೂರ್ಣವಾಗಿ ನೋಡಿ ಮುಂದೆ ಆ ರೀತಿ ಆಗದೇ ಇರುವಂತೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು). — ಸ್ವಾಮಿ, ಮಾನ್ಯ ಸದಸ್ಯರು ಹೇಳಿರತಕ್ಕ ಕೆಲವು ವಿಷಯಗಳು ಸರಿ. ಈ ಬೆಂಗಳೂರು ಸೌತ್ ತಾಲ್ಲೂಕು ಟ್ರಿಬ್ಯುನಲ್ ಕೆಲಸ ಮಾಡತಕ್ಕ ರೀತಿ ಸ್ವಲ್ಪ ಕಾಲ ಸರಿಯೀಲಿಲ್ಲ. ಅದಕ್ಕೋಸ್ಕರ ಅದನ್ನು ಪುನರ್ ರಚನೆ ಮಾಡಬೇಕಾಯಿತು. ಅದಕ್ಕೋಸ್ಕರ ಈಗ ಪುನರ್ ರಚನೆ ಮಾಡಿದ್ದೇವೆ. ಇದರಲ್ಲಿ ಹಿಂದೆ ಇದ್ದ ಸದಸ್ಯರ ಮೇಲೆ ಯಾವ ಆರೋಪಣೆ ಇಲ್ಲ. ಅವರ ಮೇಲೆ ಆರೋಪಣೆ ಬಂದು ಅವರನ್ನು ತೆಗೆಯಲಿಲ್ಲ. ಅವರೆ ಇನ್ನೊಬ್ಬ ಸದಸ್ಯರು ಸ್ವಲ್ಪ ಜಾಸ್ತಿ ಓದಿರುವವರು, ಸ್ವಲ್ಪ ಜಾಸ್ತಿ ಯೋಗ್ಯತೆ ಇರುವವರು ಅವರನ್ನು ಈ ಟ್ರಿಬ್ಯುನಲ್‌ನಲ್ಲಿ ಸದಸ್ಯರನ್ನಾಗಿ ನೇಮಿಸಬೇಕೆಂದು ಮಾಡಿದ್ದೇವೆ. ಬೇರ ಯಾವ ಕಾರಣವೂ ಇಲ್ಲ.

ಅವರು ಇದ್ದಾಗ ಯಾವ ತೀರ್ಮಾನಗಳಾಗಿವೆ ಅವುಗಳನ್ನು ಪುನರ್‌ಪರಿಶೀಲನೆ ಮಾಡತಕ್ಕಂಥಾ ಉದ್ದೇಶ ನಮಗೇನೂ ಇಲ್ಲ ; ಅದು ಕಾನೂನು ಪ್ರಕಾರವೂ ಆಗುವುದಿಲ್ಲ. ಅವರು ಸರಿಯಾಗಿ ಮಾಡಿದ್ದಾರೆ. ಮಾನ್ಯ ರಾಜಶೇಖರನ್ ಎಂ.ಎಲ್.ಎ. ಅವರು ಆ ಭೂ ನ್ಯಾಯ ಮಂಡಲಿಯಲ್ಲಿ ಸದಸ್ಯರಾಗಿದ್ದಾರೆ. ಅವರು ಸದಸ್ಯರಾಗಿರುವಾಗ ನ್ಯಾಯ ದೊರಕಿಸುವುದರಲ್ಲಿ ಯಾವ ಆತಂಕವೂ ಇಲ್ಲ ಎಂದು ನನಗೆ ಕಾಣುತ್ತದೆ. ಆದರೆ ಅವರು ಎಂದಾದರೂ ಅಲ್ಲಿಗೆ ಹೋಗಿದ್ದಾರೆಯೇ ಎನ್ನುವುದು ಸಂಶಯವಾಗಿದೆ. ಅವರು ಹೋಗಿದ್ದಾರೆಂದು ನನಗೆ ಕಾಣಲಿಲ್ಲ.

ಶ್ರೀ ಬಿ. ವಿ. ರಾವಂಚಂದ್ರ ರೆಡ್ಡಿ. — ಮೊಟಿಂಗ್ ಕರೆಯುತ್ತಾ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ. — ಮಾನ್ಯ ರಾಜಶೇಖರನ್ ಅವರು ಟ್ರಿಬ್ಯುನಲನ್ನು ಶಕ್ತಿಯುತವಾಗಿ ಮಾಡುವುದಕ್ಕೋಸ್ಕರ ಅವರು ಹೋಗಿ ಆಸಕ್ತಿ ವಹಿಸಿದರೆ ಮಾನ್ಯ ರಾಮಚಂದ್ರ ರೆಡ್ಡಿಯವರು ಹೊರಿಸತಕ್ಕ ದೂರಿಗೆ ಯಾವ ಆಧಾರವಿಲ್ಲದ ಹಾಗೆ ಆಗುತ್ತದೆ ಮೊನ್ನೆ ತಾನೆ ಹುಕುಂ ಮಾಡಿದ್ದೇವೆ. ರೆವಿನ್ಯೂ ಸೆಕ್ರೆಟರಿಯವರು ೧೬ನೇ ಫೆಬ್ರವರಿ ೧೯೭೮, ೧೭ನೇ ಫೆಬ್ರವರಿ ೧೯೭೯ರಲ್ಲಿ ಬಂದು ಸುತ್ತೋಲೆಯನ್ನು ಕಳಿಸಿದ್ದಾರೆ. ಚೀಫ್ ಸೆಕ್ರೆಟರಿಯವರು ೧೨ನೇ ಫೆಬ್ರವರಿ ೧೯೭೯ರಲ್ಲಿ ಪರ್ಸನಲ್ಲಾಗಿ ಟ್ರಿಬ್ಯುನಲ್ ಛೇರ್ಮನ್‌ಗಳಿಗೆ ಕಾಗದ ಬರೆದು ವಾರಕ್ಕೆ ಐದಾರು ಬಾರಿ ಕೆಲಸಮಾಡಬೇಕು ಎಂದು ಹೇಳಿದ್ದಾರೆ. ಮತ್ತೆ ಟ್ರಿಬ್ಯುನಲ್‌ಗಳಲ್ಲಿ ಇರತಕ್ಕ ಕೇಸುಗಳನ್ನು ಶಿಘ್ರವಾಗಿ ವಿಲೇವಾರಿ ಮಾಡತಕ್ಕ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಾನ್ಯ ರಾಮಚಂದ್ರ ರೆಡ್ಡಿಯವರಿಗೆ ಸಂತೋಷವಾಗಿರಬೇಕು. ಟ್ರಿಬ್ಯುನಲ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ. — ಮಾನ್ಯ ಮಂತ್ರಿಗಳು ಒಬ್ಬ ಸದಸ್ಯರನ್ನು ತೆಗೆದುಹಾಕಿ ಇನ್ನೂ ಹೆಚ್ಚು ಓದಿರತಕ್ಕ ಸದಸ್ಯರನ್ನು ಹಾಕಿದ್ದೇವೆ ಎಂದು ಹೇಳಿದರು. ಇವರು ತೆಗೆದುಹಾಕಿರುವ ಸದಸ್ಯ ಎಂ.ಎ., ಎಂ.ಎಲ್.ಮಾಡಿದ್ದ, ಈಗ ಇವರು ಹಾಕಿರುವ ಸದಸ್ಯರು ಕೇವಲ ಬಿ.ಇ. ಇಂಜಿನಿಯರ್. ಯಾರದು ಹೆಚ್ಚು ಸ್ವಾಮಿ. ಮಾನ್ಯ ಮಂತ್ರಿಗಳು ಭೂ ನ್ಯಾಯ ಮಂಡಲಿಯಲ್ಲಿ ಯಾರು ಹೆಚ್ಚಿಗೆ

ಓದಿದ್ದಾರೆ ಅವರನ್ನು ಹಾಕಿದ್ದೇವೆ ಎಂದು ಹೇಳಿದರು. ಹೇಳುವುದು ಒಂದು ಮಾಡುವುದು ಒಂದು. ಇದಕ್ಕೆ ಹೆಚ್ಚು ಓದಿರುವುದು ಬೇಕೇ, ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ.—ಅವರಿಗೆ ಯೋಗ್ಯತೆ ಇದೆ ಎಂದು ತಿಳಿದಿದ್ದೇವೆ, ಹಾಕಿದ್ದೇವೆ, ವ್ಯತ್ಯಾಸವೇನಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ನಾನು ಮಾತನಾಡಲೇ ಬಾರದು ಎಂದು ಇದ್ದೆ. ಮಾನ್ಯ ಮಂತ್ರಿಗಳು ನನ್ನ ಹೆಸರನ್ನು ಎತ್ತಿದ್ದರಿಂದ ನಾನು ಪ್ರಸ್ತಾಪಮಾಡಲೇಬೇಕು. ಮಾನ್ಯ ಮಂತ್ರಿಗಳು ಹೇಳಿದರು, ಕೆಲವು ಕಾರಣಗಳಿಂದ ಭೂನ್ಯಾಯ ಮಂಡಲಿ ಕೆಲಸ ಮಾಡುತ್ತಾ ಇರಲಿಲ್ಲ ಎಂದು, ಅವರ ಗಮನಕ್ಕೆ ಬಂದಿದೆ. ಈ ಭೂನ್ಯಾಯ ಮಂಡಲಿಗಳು ಚೆನ್ನಾಗಿ ಕೆಲಸ ಮಾಡಬೇಕು, ಇದರ ಬಗ್ಗೆ ಯಾವ ಕಾನೂನು ಮಾಡಿದ್ದೇವೆ ಅದರ ಪೂರ್ಣ ಲಾಭ ಜನಗಳಿಗೆ ಸಿಗಬೇಕು ಎನ್ನುವ ಆತುರ ಅವರಿಗೆ ಇದೆ. ಆದರೆ ಎಷ್ಟರಮಟ್ಟಿಗೆ ಭೂನ್ಯಾಯ ಮಂಡಲಿಗಳು ಕೆಲಸ ಮಾಡುತ್ತಿವೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ನಾನು ಮೂರು, ನಾಲ್ಕು ಮೀಟಿಂಗುಗಳಿಗೆ ಹೋಗಿದ್ದೆ, ಕಾಳಿತುಕೊಂಡು ನೋಡಿದೆ. ಅದರಲ್ಲಿ ಏನಾಗುತ್ತದೆ ಎಂದರೆ, ನಿಜವಾಗಲೂ ಯಾರಿಗೆ ಜಮೀನಿನ ಒಡೆತನ ಸಿಕ್ಕಬೇಕೋ ಅವರಿಗೆ ಸರಿಯಾಗಿ ಸಿಕ್ಕುತ್ತಾ ಇಲ್ಲ. ಯಾವ ಕೇಸನ್ನು ತೆಗೆದುಕೊಂಡರೂ ಅವರು ಯಾವ ಗುಂಪಿನ ಪರ ಇದ್ದಾರೆ. ಯಾವ ಗುಂಪಿನ ವಿರೋಧ ಇದ್ದಾರೆ, ಯಾವ ಕಡೆ ಕೆಲಸಮಾಡುತ್ತಾರೆ, ಯಾವ ಕಡೆ ಕೆಲಸ ಮಾಡುವುದಿಲ್ಲ—ಈ ರೀತಿ ಆದರೆ ಭೂನ್ಯಾಯಮಂಡಲಿಗಳು ದಕ್ಷತೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವೇ. ಇದನ್ನು ತಾವು ಪರಿಶೀಲನೆಮಾಡಬೇಕು. ಎರಡನೆಯದಾಗಿ, ಕೆಲವು ಭೂನ್ಯಾಯ ಮಂಡಲಿಗಳಲ್ಲಿ ಬೇಕು ಎಂದು ಅವರ ಪಕ್ಷದವರನ್ನೇ ಹಾಕಿದ್ದಾರೆ.

MR. SPEAKER.—This is a matter under rule 312. There is no scope for discussion. ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟಹಾಗೆ ಕ್ಲಾರಿಫಿಕೇಷನ್ ಕೇಳಿದ್ದಾರೆ, ಮಂತ್ರಿಗಳು ಅದಕ್ಕೆ ಉತ್ತರ ಕೊಟ್ಟಿದ್ದಾರೆ, ವಿಷಯ ಅಲ್ಲಿಗೆ ಮುಗಿಯಿತು. ಜನರಲ್ಲಾಗಿ ಹೇಳುವುದಾದರೆ ಬಡ್ಜೆಟ್ ಮೇಲೆ ಮಾತನಾಡುವಾಗ ಆಗಲೀ, ಅಥವಾ ಇನ್ನಾವುದಾದರೂ ಭಾಷಣ ಮಾಡುವಾಗ ಆಗಲೀ ಹೇಳಿ.

ಶ್ರೀ ಎಂ. ವಿ. ರಾಜಶೇಖರನ್.—ಮಂತ್ರಿಗಳು, ಮಾನ್ಯ ರಾಜಶೇಖರನ್ ಅವರು ಭೂನ್ಯಾಯ ಮಂಡಲಿಯಲ್ಲಿದ್ದಾರೆ, ಅವರು ಸರಿಯಾಗಿ ನ್ಯಾಯ ದೊರೆಯುವಂತೆ ನೋಡಿಕೊಳ್ಳುತ್ತಾರೆ ಎಂದು ಹೇಳಿದರು. ಅಲ್ಲಿರತಕ್ಕವರು ಬಹುಭಾಗ ನನ್ನ ವಿರುದ್ಧವಾಗಿ ಕೆಲಸಮಾಡುವುದಾದರೆ ನನ್ನ ಒಂದು ಓಟಿನಿಂದ ಅದನ್ನು ಬದಲಾವಣೆಮಾಡುವುದಕ್ಕಾಗುತ್ತದೆಯೇ? ಅದಕ್ಕೆ ನಾನು ರಾಜಿನಾಮೆ ಕೊಡುತ್ತೇನೆಂದು ಹೇಳಿದೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ಮಾನ್ಯ ರಾಜಶೇಖರನ್ ಅವರ ಮೇಲೆ ಮಾನ್ಯ ಮಂತ್ರಿಗಳಿಗೆ ನಂಬಿಕೆ ಇದ್ದರೆ ಅವರೊಬ್ಬರನ್ನೇ ಏಕಸದಸ್ಯ ಮಂಡಲಿಯನ್ನಾಗಿ ಏಕೆಮಾಡಬಾರದು?

(ಉತ್ತರ ಇಲ್ಲ.)

Ban on the R.S.S.

SRI QAMARUL ISLAM.—I want clarification regarding yesterday's news about ban on RSS. The Government has not taken any decision I want clarification from the Chief Minister.

MR. SPEAKER.—The hon. Member may please resume his seat.

SRI QAMARUL ISLAM.—It is zero hour and such matter can be raised. It is the convention of this House.

MR. SPEAKER.—I am not permitting you to raise the matter. We will go to the next item.